ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2019–20 ದಿನಾಂಕ: 27–01–2020

## ಪತ್ರಿಕಾ ಆಮಂತ್ರಣ

**1. ಬೆಂಗಳೂರು ನಗರದ ಲಾಲ್‌ಬಾಗ್ ಉದ್ಯಾನವನಕ್ಕೆ ವಸತಿ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವ ವಿ. ಸೋಮಣ್ಣ ಅವರ ಭೇಟಿ – ವಾಯು ವಿಹಾರಕ್ಕೆ ಆಗಮಿಸುವ ನಾಗರಿಕರೊಡನೆ ಸಂವಾದ ಕಾರ್ಯಕ್ರಮ:**

**ದಿನಾಂಕ: 28–01–2020, ಮಂಗಳವಾರ, ಸಮಯ: ಬೆಳಿಗ್ಗೆ 6.00 ಗಂಟೆಗೆ**

**ಸ್ಥಳ: ಲಾಲ್‌ಬಾಗ್ ಉದ್ಯಾನವನ, ಬೆಂಗಳೂರು.**

**2. ಕಂದಾಯ ಇಲಾಖೆ ವತಿಯಿಂದ ಅಕ್ರಮ – ಸಕ್ರಮ ಯೋಜನೆಯಡಿ 10,000 ಫಲಾನುಭವಿಗಳಿಗೆ ಮನೆಗಳ ಹಕ್ಕುಪತ್ರ ವಿತರಣಾ ಸಮಾರಂಭ.**

**ಉದ್ಘಾಟನೆ:**

**ಬಿ.ಎಸ್.ಯಡಿಯೂರಪ್ಪ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.**

**ಹಕ್ಕುಪತ್ರಗಳ ವಿತರಣೆಗೆ ಚಾಲನೆ:**
**ಆರ್. ಅಶೋಕ್,**
**ಕಂದಾಯ ಮತ್ತು ಪೌರಾಡಳಿತ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲಾ ಉಸ್ತುವಾರಿ ಸಚಿವರು.**

**ಅಧ್ಯಕ್ಷತೆ:**
**ಉದಯ ಬಿ. ಗರುಡಾಚಾರ್. ಶಾಸಕರು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ.**

**ದಿನಾಂಕ: 28–01–2020 ಮಂಗಳವಾರ, ಸಮಯ: ಅಪರಾಹ್ನ 12.00 ಗಂಟೆಗೆ.**

**ಸ್ಥಳ: ನ್ಯಾಷನಲ್ ಕಾಲೇಜು ಮೈದಾನ, ಬಸವನಗುಡಿ, ಬೆಂಗಳೂರು – 560 004.**

3. **ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ಅವರಿಂದ "ಸಂವೇದನಾ" ಫೋನ್-ಇನ್ ಸಂವಾದ ಕಾರ್ಯಕ್ರಮ – ವಿಶೇಷವಾಗಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಾರ್ಷಿಕ ಪರೀಕ್ಷೆ ಕುರಿತು ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರೊಂದಿಗೆ ಸಂವಹನ.**

**ದಿನಾಂಕ: 28-01-2020, ಮಂಗಳವಾರ, ಸಮಯ: ಸಂಜೆ 5.00 ರಿಂದ 6.30 ಗಂಟೆ.**
**ಸ್ಥಳ: ಡಿಎಸ್‌ಇಆರ್‌ಟಿ, ನಂ 4, 100 ಅಡಿ ಹೊರ ವರ್ತುಲ ರಸ್ತೆ,**
**ಬನಶಂಕರಿ 3ನೇ ಹಂತ, ಬೆಂಗಳೂರು.**

ಪತ್ರಿಕಾ ಪ್ರಕಟಣೆ

# ಲಾಗ್‌ಬಾಗ್ ಉದ್ಯಾನವನದಲ್ಲಿ ಸಾರ್ವಜನಿಕರೊಂದಿಗೆ ವಸತಿ ಸಚಿವರ ಸಂವಾದ

**ಬೆಂಗಳೂರು ಜನವರಿ 27 (ಕರ್ನಾಟಕ ವಾರ್ತೆ)**

ಬೆಂಗಳೂರು ನಗರದಲ್ಲಿನ ಲಾಲ್‌ಬಾಗ್ ಉದ್ಯಾನವನಕ್ಕೆ ಜನವರಿ 28 ರಂದು ಬೆಳಿಗ್ಗೆ 6.00 ಗಂಟೆಗೆ ವಸತಿ, ತೋಟಗಾರಿಕೆ ಹಾಗೂ ರೇಷ್ಮೆ ಸಚಿವ ವಿ. ಸೋಮಣ್ಣ ಅವರು ಭೇಟಿ ನೀಡಿ, ಮುಂಜಾನೆ ವಾಯುವಿಹಾರಕ್ಕೆ ಆಗಮಿಸುವ ನಾಗರಿಕರೊಡನೆ ಸಂವಾದ ನಡೆಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

## "ಸಂವೇದನಾ" ಫೋನ್–ಇನ್ ಸಂವಾದ ಕಾರ್ಯಕ್ರಮ

**ಬೆಂಗಳೂರು ಜನವರಿ 27 (ಕರ್ನಾಟಕ ವಾರ್ತೆ)**

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಎಸ್. ಸುರೇಶ್‌ಕುಮಾರ್ ಅವರು ಜನವರಿ 28 ರ ಮಂಗಳವಾರ ಸಂಜೆ 5.00 ರಿಂದ 6.30 ಗಂಟೆವರೆಗೆ ಡಿಎಸ್‌ಎಆರ್‌ಟಿಯಲ್ಲಿ "ಸಂವೇದನಾ" ಫೋನ್–ಇನ್ ಸಂವಾದದ 3ನೇ ಕಾರ್ಯಕ್ರಮದಲ್ಲಿ ಭಾಗವಹಿಸಿ ವಿಶೇಷವಾಗಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಾರ್ಷಿಕ ಪರೀಕ್ಷೆ ಕುರಿತು ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರೊಂದಿಗೆ ನೇರ ಮಾತುಕತೆ ನಡೆಸಲಿದ್ದಾರೆ.

080–26725654 ಮತ್ತು 080 + 26725655 ಸಂಖ್ಯೆಗಳಿಗೆ ಫೋನ್ ಮಾಡಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಾರ್ಷಿಕ ಪರೀಕ್ಷೆಗಳ ಕುರಿತಂತೆ ಸಚಿವರನ್ನು ಪ್ರಶ್ನೆ ಕೇಳಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

## ಫೆಬ್ರವರಿ 19 ರಿಂದ 26 ರವರೆಗೆ
## ರಸ್ತೆಗಳ ಮೇಲೆ ಓಡಾಡುವ ವಾಹನಗಳ ಸಂಚಾರದ ಗಣತಿ

**ಬೆಂಗಳೂರು ಜನವರಿ 27 (ಕರ್ನಾಟಕ ವಾರ್ತೆ)**

ಕರ್ನಾಟಕ ರಾಜ್ಯದ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ವ್ಯಾಪ್ತಿಯಲ್ಲಿನ ರಾಜ್ಯ ಹೆದ್ದಾರಿಗಳು ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ಮೇಲೆ ಓಡಾಡುವ ವಾಹನಗಳ ಸಂಚಾರದ ಗಣತಿಯನ್ನು ನಡೆಸಲಾಗುತ್ತಿದ್ದು, 2020ನೇ ಸಾಲಿನ ರಸ್ತೆ ಸಂಚಾರ ಗಣತಿಯನ್ನು ಫೆಬ್ರವರಿ 19 ಬೆಳಿಗ್ಗೆ 6.00 ಗಂಟೆಯಿಂದ 26 ರ ಬೆಳಿಗ್ಗೆ 6.00 ಗಂಟೆಯವರೆಗೆ ಸತತವಾಗಿ 7 ದಿನಗಳ ಕಾಲ ನಡೆಸಲಾಗುವುದು. ಈ ಸಮೀಕ್ಷೆಗೆ ರಾಜ್ಯದ್ಯಾಂತ ಸುಮಾರು 3544 ಗಣತಿ ಕೇಂದ್ರಗಳನ್ನು ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಗಳ ಮೇಲೆ ಆಯ್ಕೆ ಮಾಡಲಾಗಿದೆ.

ಈ ಗಣತಿಯ ಮುಖ್ಯ ಉದ್ದೇಶ, ವಾಹನ ಸಂಚಾರದ ಬೆಳವಣಿಗೆ ತ್ರೀವತೆಯನ್ನು ಗಮನಿಸಿ ರಸ್ತೆಗಳ ಮೇಲ್ಮೈಯನ್ನು ಅಭಿವೃದ್ಧಿ ಪಡಿಸುವುದು, ರಸ್ತೆಗಳನ್ನು ಅಗಲಪಡಿಸುವುದು

ಹಾಗೂ ರಸ್ತೆಗಳನ್ನು ಮೇಲ್ದರ್ಜೆಗೇರಿಸುವುದು ಇದೇ ಮೊದಲಾದ ಹಲವಾರು ರಸ್ತೆಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಸರ್ಕಾರವು ರೂಪಿಸಲು ಮತ್ತು ಕೈಗೆತ್ತಿಗೊಳ್ಳಲು ಅನುಕೂಲವಾಗುವುದು.

ವಾಹನ ಸಂಚಾರ ವಿವರಗಳನ್ನು ಸಂಗ್ರಹಿಸಲು ರಾಜ್ಯದಲ್ಲಿನ 3544 ಗಣತಿ ಕೇಂದ್ರಗಳಲ್ಲಿ ಸಹಾಯಕ ಇಂಜನಿಯರ್ / ಕಿರಿಯ ಇಂಜನಿಯರ್‌ಗಳನ್ನು ನೇಮಿಸಲಾಗಿದೆ. ದಿನಾಂಕ 19–02–2020 ರಿಂದ 26–02–2020 ರವರೆಗೆ ನಡೆಸಲಾಗುವ ಈ ವಾಹನದ ಸಂಚಾರದ ಗಣತಿಯನ್ನು ಯಶಸ್ವಿಯಾಗಿ ನಡೆಸಲು ವಾಹನ ಚಾಲಕರು ಮತ್ತು ಸಾರ್ವಜನಿಕರು ಸಹಕರಿಸಲು ಕೋರಲಾಗಿದೆ.

## ರಫ್ತು ನಿರ್ವಹಣಾ ತರಬೇತಿ ಕಾರ್ಯಕ್ರಮ

**ಬೆಂಗಳೂರು ಜನವರಿ 27 (ಕರ್ನಾಟಕ ವಾರ್ತೆ)**

ವಿಶ್ವೇಶ್ವರಯ್ಯ ವ್ಯಾಪಾರ ಉತ್ತೇಜನ ಕೇಂದ್ರವು ಕರ್ನಾಟಕ ಸರ್ಕಾರದ ಅಂಗೀಕೃತ ಸಂಸ್ಥೆಯಾಗಿದ್ದು ರಾಜ್ಯದ ರಫ್ತು ಉತ್ತೇಜನಾ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿದೆ. ಪ್ರಸ್ತುತ ಈ ಕೇಂದ್ರವು ರಾಜ್ಯದ ರಫ್ತು ಸಾಮರ್ಥ್ಯವನ್ನು ಹೆಚ್ಚಿಸುವ 6 ದಿನಗಳ 104 ನೇ ರಫ್ತು ನಿರ್ವಹಣಾ ತರಬೇತಿ ಕಾರ್ಯಕ್ರಮವನ್ನು ಫೆಬ್ರವರಿ 24 ರಿಂದ 29 ರವರೆಗೆ ಬೆಂಗಳೂರಿನ ಕೇಂದ್ರ ಕಚೇರಿಯಲ್ಲಿ ಆಯೋಜಿಸಲು ಉದ್ದೇಶಿಸಿರುತ್ತಾರೆ. ರಾಜ್ಯದ ಕೈಗಾರಿಕೋದ್ಯಮಿಗಳಿಗೆ ಮತ್ತು ಭಾವಿ ರಫ್ತುದಾರರನ್ನು ರಫ್ತು ಕ್ಷೇತ್ರಕ್ಕೆ ಪ್ರವೇಶಿಸಲು ಪ್ರೋತ್ಸಾಹಿಸುವ ಮೂಲಕ ರಾಜ್ಯದ ರಫ್ತು ಸಾಮರ್ಥ್ಯವನ್ನು ಹೆಚ್ಚಿಸುವ ದೃಷ್ಟಿಯಿಂದ ಈ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಈ ಕಾರ್ಯಕ್ರಮವು ರಫ್ತು ವ್ಯಾಪಾರಕ್ಕೆ ಸಂಬಂಧಪಟ್ಟ ಕೆಳಗೆ ತಿಳಿಸಲಾದ ಎಲ್ಲಾ ಮುಖ್ಯವಾದ ಅಂಶಗಳನ್ನು ಒಳಗೊಂಡಿದ್ದು, ರಫ್ತು ವ್ಯಾಪಾರವನ್ನು ಪ್ರಾರಂಭಿಸಲು ಉಪಯುಕ್ತವಾಗಿರುತ್ತದೆ.

- Introduction to Export Business & WTO
- Introduction on Intellectual Property Rights (IPR)

- Export Import Policy (Foreign Trade Policy)
- Export Documentation.
- Export Credit
- Export Marketing Plan.
- Export Quality Management.
- Bank Financing & Regulations.
- Customers @ Central Excise Formalities.
- Export Packaging
- Export Costing & Pricing
- Tade Fairs @ Exhibitions.
- Procedures and Formalities.
- Roles of export Promotion Councils, ECGC, Export Houses, VTPC, C & F Agents.
- Internet and E-commerce.
- Marine Insurance.
- Field visits to Inland Container Depot and Bangalore Air Cargo Complex.
- Export Incentives.

ರಫ್ತು ವ್ಯಾಪಾರವನ್ನು ಪ್ರಾರಂಭಿಸಲು ಆಸಕ್ತಿಯುಳ್ಳ ಕೈಗಾರಿಕೆಗಳೂ/ಭಾವಿ ರಫ್ತುದಾರರು ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಲು ವಿಟಿಪಿಸಿ ಕಚೇರಿಯಲ್ಲಿ ನೋಂದಣಿಯನ್ನು ಮಾಡಿಸತಕ್ಕದ್ದು.

ವಿಟಿಪಿಸಿ ಟ್ರೈನಿಂಗ್ ಹಾಲ್, ಬಿಎಂಟಿಸಿ ಕಟ್ಟಡ, 'ಎ' ಬ್ಲಾಕ್, 3ನೇ ಮಹಡಿ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು – 560 027 ಈ ವಿಳಾಸದಲ್ಲಿ ತರಬೇತಿ ನಡೆಯಲಿದೆ.

ಹೆಚ್ಚಿನ ವಿವರಕ್ಕಾಗಿ ದಯವಿಟ್ಟು ಶ್ರೀ ಸಿ.ಎಸ್. ಭಾಸ್ಕರ್, ವಿಟಿಪಿಸಿ, ಬೆಂಗಳೂರು ಇವರನ್ನು ಸಂಪರ್ಕಿಸಬಹುದಾಗಿದೆ. (ಮೊ. 9880958218). ಅಲ್ಲದೆ ಇಮೇಲ್ vtpckarnataka@gmail.com ವೆಬ್‌ಸೈಟ್ www.vtpc.karnataka.gov.in ಅನ್ನು ವೀಕ್ಷಿಸಬಹುದಾಗಿದೆ.